ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: DCE/BUD/GEN/62/2023

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು ದಿನಾಂಕ 15.12.2023.

ಇವರಿಗೆ:

**ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು**

ಮಾನ್ಯರೆ,

ವಿಷಯ: ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾದ ಸಿಬ್ಬಂದಿಗಳಿಗೆ ಪ್ರೋತ್ಸಾಹಧನ ಪಾವತಿಸಲು ಅನುದಾನ ಬಿಡುಗಡೆ ಮಾಡಲು ಮಾಹಿತಿ ಸಲ್ಲಿಸುವ ಬಗ್ಗೆ.

ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ:99:ಸೇವನೆ:2022 ದಿ:24.01.2023

*****

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಪ್ರಯುಕ್ತ ಪ್ರೋತ್ಸಾಹಧನ ಮಂಜೂರು ಮಾಡಲು ಮಾಹಿತಿ ಸಲ್ಲಿಸುವಂತೆ ಸೂಚಿಸಲಾಗಿತ್ತು.

ಕಾಲೇಜುಗಳಿಂದ ಸ್ವೀಕೃತವಾಗಿರುವ ಮಾಹಿತಿಯನ್ನು ಪರಿಶೀಲಿಸಿದ್ದು, ಹಲವು ನ್ಯೂನತೆಗಳನ್ನು ಗುರುತಿಸಲಾಗಿದೆ. ಹಾಗೂ ಅರ್ಹ ಸಿಬ್ಬಂದಿಗಳಿಗೆ ವೇತನ ಸೆಳೆಯುವ ಕಾಲೇಜಿನಿಂದಲೇ (ಲೀನ್ ಕಾಲೇಜು) ಪ್ರೋತ್ಸಾಹಧನ ನೀಡಬೇಕಾಗಿದ್ದು, ಸಾರ್ವತ್ರಿಕ ವರ್ಗಾವಣೆಯಲ್ಲಿ ಹಲವು ಬದಲಾವಣೆ ಆಗಿರುವುದರಿಂದ ಪರಿಷ್ಕೃತ ಮಾಹಿತಿಯೊಂದಿಗೆ ಅರ್ಹ ಸಿಬ್ಬಂದಿಗಳ ದೃಢೀಕೃತ ಅಂಕಪಟ್ಟಿ ಮತ್ತು ಕಾಲೇಜಿನಿಂದ ಅನುಮೋದನೆಗೊಂಡ ಕಛೇರಿ ಆದೇಶ ಹಾಗೂ ಈ ಪತ್ರಕ್ಕೆ ಲಗತ್ತಿಸಿರುವ ನಿಗದಿತ ನಮೂನೆಯೊಂದಿಗೆ ದಿನಾಂಕ **22.12.2023**ರ ಒಳಗಾಗಿ ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ.

ಕೊನೆಯ ದಿನಾಂಕದ ನಂತರ ಮಾಹಿತಿ ಸ್ವೀಕೃತವಾದಲ್ಲಿ ಅನುದಾನ ಲಭ್ಯತೆ ಇದ್ದಲ್ಲಿ ಜೇಷ್ಠತೆ ಪರಿಗಣಿಸಿ ಅನುದಾನ ಬಿಡುಗಡೆ ಮಾಡಲಾಗುವುದು.

ತಮ್ಮ ವಿಶ್ವಾಸಿ

ಹೆಚ್ಚುವರಿ ನಿರ್ದೇಶಕರು
ಕಾಲೇಜು ಶಿಕ್ಷಣ ಇಲಾಖೆ

**ಸೂಚನೆಗಳು:**

1. ದಿನಾಂಕ 22.03.2012ಕ್ಕಿಂತ ಪೂರ್ವದಲ್ಲಿ ನೇಮಕ ಹೊಂದಿದ್ದರೆ ಮಾತ್ರ ಪ್ರೋತ್ಸಾಹಧನ ಪಡೆಯಲು ಅರ್ಹರಿರುತ್ತಾರೆ.
2. ದಿನಾಂಕ 17.04.2021ರ ಒಳಗಾಗಿ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯನ್ನು ಉತ್ತೀರ್ಣರಾಗಿದ್ದರೆ ಮಾತ್ರ ಪ್ರೋತ್ಸಾಹಧನ ಪಡೆಯಲು ಅರ್ಹರಿರುತ್ತಾರೆ.
3. ಪ್ರಸ್ತುತ ವೇತನ ಸೆಳೆಯುತ್ತಿರುವ ಕಾಲೇಜಿನಲ್ಲೇ ಪ್ರೋತ್ಸಾಹಧನ ಪಡೆಯಬೇಕಾಗಿರುತ್ತದೆ.
4. ಡಿಜಿಟಲ್ ಸಹಿ ಹೊಂದಿರುವ ವ್ಯಾಲಿಡ್ ಪ್ರಮಾಣಪತ್ರವನ್ನು ಪರಿಶೀಲಿಸಿ ದೃಢೀಕರಿಸಿ ಪ್ರತಿಯನ್ನು ಸಲ್ಲಿಸಲು ಸೂಚಿಸಿದೆ.

ಪ್ರತಿ: ಮ್ಯಾನೇಜರ್ / ಅಧೀಕ್ಷಕರು ಮಾಹಿತಿ ತಂತ್ರಜ್ಞಾನ ವಿಭಾಗ ಕಾಶಿಇ ಕೇಂದ್ರ ಕಛೇರಿ ಬೆಂಗಳೂರು-ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲು

ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ /ಬೋಧಕೇತರ ಸಿಬ್ಬಂದಿಗಳು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಪ್ರೋತ್ಸಾಹ ಧನ ನೀಡಲು ಅನುದಾನ ಕೋರಿಕೆ ಸಲ್ಲಿಸುವ ಬಗ್ಗೆ.

| | |
|---|---|
| ಕಾಲೇಜಿನ ಹೆಸರು ಮತ್ತು ವಿಳಾಸ | |
| ಪ್ರಾಂಶುಪಾಲರ ದೂರವಾಣಿ ಸಂಖ್ಯೆ | |
| ಖಜಾನೆ-2 K2 DDO CODE | |

| ಕ್ರಮ ಸಂಖ್ಯೆ | ನೌಕರರ ಹೆಸರು | ನೇಮಕಾತಿ ಹೊಂದಿದ ದಿನಾಂಕ | ಕೆ.ಜಿ.ಐ.ಡಿ ಸಂಖ್ಯೆ | ಸಿಬ್ಬಂದಿಗಳ ಖಜಾನೆ-2 ರಸಿಪಿಯಂಟ್ ಐಡಿ | CLT ಅಂಕಪಟ್ಟಿ ಸಂಖ್ಯೆ | CLT ಪರಿಕ್ಷೆ ಉತ್ತೀರ್ಣಗೊಂಡ ದಿನಾಂಕ | CLT ಪರಿಕ್ಷೆಯಲ್ಲಿ ಪಡೆದ ಅಂಕಗಳು | ಕಛೇರಿ ಅನುಮೋದನ ಆದೇಶ ಸಂಖ್ಯೆ ಮತ್ತು ದಿನಾಂಕ | ಷರಾ |
|---|---|---|---|---|---|---|---|---|---|
| 1 | | | | | | | | | |
| 2 | | | | | | | | | |
| 3 | | | | | | | | | |
| 4 | | | | | | | | | |
| 5 | | | | | | | | | |
| 6 | | | | | | | | | |
| 7 | | | | | | | | | |
| 8 | | | | | | | | | |
| 9 | | | | | | | | | |
| 10 | | | | | | | | | |

ಈ ಮೇಲ್ಕಂಡ ಕೋಷ್ಟಕದಲ್ಲಿರುವ ಎಲ್ಲಾ ಮಾಹಿತಿಯು ಪರಿಶೀಲಿಸಲಾಗಿದ್ದು, ಸರಿಯಾಗಿದೆ ಎಂದು ದೃಡೀಕರಿಸಲಾಗಿದೆ.

ಸ್ಥಳ :

ದಿನಾಂಕ:

ವ್ಯವಸ್ಥಾಪಕರು/ಅಧೀಕ್ಷಕರು/ಕಛೇರಿ ಸಿಬ್ಬಂದಿಯವರ ಸಹಿ

ಪ್ರಾಂಶುಪಾಲರ ಸಹಿ